# ಮೇಲ್ಮನೆ 7 ಸದಸ್ಯರಿಂದ ಪ್ರಮಾಣ ಸ್ವೀಕಾರ

## ನೂತನ ಸದಸ್ಯರಿಗೆ ಪ್ರತಿಜ್ಞಾವಿಧಿ ಬೋಧಿಸಿದ ಸಭಾಪತಿ ಬಸವರಾಜ ಹೊರಟ್ಟಿ



■ **ಉದಯವಾಣಿ ಸಮಾಚಾರ**

**ಬೆಂಗಳೂರು:** ರಾಜ್ಯ ವಿಧಾನಸಭೆಯಿಂದ ವಿಧಾನಪರಿ ಷತ್ತಿಗೆ ನಡೆದಿದ್ದ ಚುನಾವಣೆಯಲ್ಲಿ ಗೆದ್ದ 7 ಸದಸ್ಯರು ಗುರುವಾರ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣ ದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಸಿಎಂ ಡಿ.ಕೆ.ಶಿವಕುಮಾರ್, ಡಿಸಿಎಂ ಡಾ.ಜಿ.ಪರ ಮೇಶ್ವರ್, ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಉಪಸ್ಥಿತಿಯಲ್ಲಿ ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ ಅವರು ನೂತನ ಸದಸ್ಯರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

**ಸಿಎಂ, ಮಾಜಿ ಸಿಎಂಗಳ ಮೇಲೂ ಪ್ರಮಾಣ:** ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಅವರು ಸತ್ಯನಿಷ್ಠೆ ಮತ್ತು ಭಗವಂತನ ಹೆಸರಿನಲ್ಲಿ ಪ್ರಮಾಣ ಮಾಡಿದರೆ, ತಿಪ್ಪಣ್ಣಪ್ಪ ಕಮಕನೂರು ಕುಲದೇವತೆ ಮಾತೆ ಮಾಣಿಕ್ಯ ಮಾತೆ ಮತ್ತು ಅಂಬಿಗರ ಚೌಡಯ್ಯ ಹೆಸರಲ್ಲಿ ಪ್ರಮಾಣ ಸ್ವೀಕರಿಸಿದರು.

ಆಂಗ್ಲ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿದ ವಿನಯ್ ಕಾರ್ತಿಕ್ ಪ್ರಕಾಶ್ ಅವರು ದೇವರು ಹಾಗೂ ಡಿ.ಕೆ.ಶಿವಕುಮಾರ್‌ಹೆಸರಲ್ಲಿ ಪ್ರಮಾಣ ಮಾಡಿದರು. ಮಳವಳ್ಳಿ ಬಿ.ಎಸ್. ಶಿವಣ್ಣ ದೇವರು ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯಹೆಸರಲ್ಲಿ ಪ್ರಮಾಣ ಸ್ವೀಕರಿಸಿದರು.

ಬಿಜೆಪಿಯ ಆರ್.ರಘು ಕೌಟಿಲ್ಯ ಭಾರತ ಮಾತೆ ಹಾಗೂ ಯಡಿಯೂರಪ್ಪ ಮೇಲೆ ಪ್ರಮಾಣ ಮಾಡಿದರೆ, ಪಿ.ವಿ. ಮೋಹನ್ ಸಂವಿಧಾನದ ಹೆಸರಲ್ಲಿ ಪ್ರಮಾಣ ಸ್ವೀಕರಿಸಿದರು.